ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027.
ದೂರವಾಣಿ : 080-22221321 / 22221325
ವೆಬ್-ಸೈಟ್ : ksrtc.karnataka.gov.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027.
Tel : 080-22221321 / 25
Website : ksrtc.karnataka.gov.in

ಸಂ.ಕರಾಸ:ಕೇಕ:ಆಡಳತ:ಸೇನಿ:/177(ಉಕ)/ 25 :2026-27 ದಿನಾಂಕ: 27-05-2026

# ಸುತ್ತೋಲೆ ಸಂಖ್ಯೆ : 1754

ವಿಷಯ: ಕ.ರಾ.ರ.ಸಾ.ಸಂಸ್ಥೆಯ ಅರ್ಹ ಮಹಿಳಾ ನೌಕರರಿಗೆ ಪ್ರಸೂತಿ ರಜೆ ಸೌಲಭ್ಯವನ್ನು ಸರ್ಕಾರದಲ್ಲಿರುವಂತೆ ವಿಸ್ತರಿಸುವ ಬಗ್ಗೆ.

ಉಲ್ಲೇಖ: 1 ಸುತ್ತೋಲೆ ಸಂಖ್ಯೆ: 1473, ದಿನಾಂಕ: 10.10.2012
2 ಸುತ್ತೋಲೆ ಸಂಖ್ಯೆ: 1638, ದಿನಾಂಕ: 10.08.2018
3 ಸುತ್ತೋಲೆ ಸಂಖ್ಯೆ: 1677, ದಿನಾಂಕ: 25.06.2020
4 ಮಂಡಳಿ ಠರಾವು ಸಂಖ್ಯೆ: 10627, ದಿನಾಂಕ: 08.05.2026

- - - -

ಕರ್ನಾಟಕ ಸರ್ಕಾರದ ಸೇವಾ ನಿಯಮಗಳಡಿ ಇರುವ ಅವಕಾಶದಂತೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ಅಧಿಕಾರಿ/ ಸಿಬ್ಬಂದಿಗಳ ಕಾರ್ಯ ವೈಖರಿ, ಕರ್ತವ್ಯದ ಒತ್ತಡ, ರಿಸ್ಕ್ ಫ್ಯಾಕ್ಟರ್ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಅವರುಗಳಿಗೆ 90 ದಿನಗಳ ಹೆರಿಗೆ ಪೂರ್ವ ರಜೆ ಹಾಗೂ 90 ದಿನಗಳ ಹೆರಿಗೆ ನಂತರದ ರಜೆಯನ್ನೊಳಗೊಂಡಂತೆ ಒಟ್ಟಾರೆ 180 ದಿನಗಳ ಹೆರಿಗೆ ರಜೆಯನ್ನು ವಿಸ್ತರಿಸಲು ಉಲ್ಲೇಖ-1 ರನ್ವಯ ನಿರ್ದೇಶನಗಳು ಜಾರಿಯಲ್ಲಿರುತ್ತವೆ.

ಸುತ್ತೋಲೆ 1677, ದಿನಾಂಕ: 25.06.2020 ರಲ್ಲಿ ತಿಳಿಸಲಾದ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವರ್ಗದ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ನಿರ್ವಹಿಸುವ ಕೆಲಸದಲ್ಲಿ ಹೆಚ್ಚಿನ ರಿಸ್ಕ್ ಫ್ಯಾಕ್ಟರ್ ಇರುವುದಿಲ್ಲವಾದ್ದರಿಂದ ಸದರಿ ಸಿಬ್ಬಂದಿಗಳು ಮತ್ತು ಅಧಿಕಾರಿಗಳಿಗೆ ಸರ್ಕಾರದಲ್ಲಿರುವಂತೆ ಒಟ್ಟಾಗಿ 180 ದಿನ ರಜೆಯನ್ನು ಅವರ ಅವಶ್ಯಕತೆಗೆ ಅನುಸಾರ ಪಡೆಯಲು ಅವಕಾಶ ಕಲ್ಪಿಸುವ ಕುರಿತು ಪ್ರಸ್ತಾವನೆಯನ್ನು ನಿಗಮದ ನಿರ್ದೇಶಕ ಮಂಡಳಿಯು ಠರಾವು ಸಂಖ್ಯೆ: 10627, ದಿನಾಂಕ: 08.05.2026 ರನ್ವಯ ಒಪ್ಪಿಗೆ ನೀಡಿರುತ್ತದೆ. ಅದರಂತೆ, ನಿಗಮದ ಅರ್ಹ ಮಹಿಳಾ ನೌಕರರಿಗೆ ಹೆರಿಗೆ ರಜೆ ಮಂಜೂರು ಮಾಡುವ ಕುರಿತು ಈ ಕೆಳಗಿನಂತೆ ಆದೇಶಿಸಲಾಗಿದೆ.

1. ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ನಿರ್ವಾಹಕಿಯರು, ಚಾಲಕಿ, ಚಾಲಕಿ-ಕಂ-ನಿರ್ವಾಹಕಿ, ತಾಂತ್ರಿಕ ಸಿಬ್ಬಂದಿ ಮತ್ತು ಮಾರ್ಗ ತಪಾಸಣೆ ಮಹಿಳಾ ಸಿಬ್ಬಂದಿಗಳ ಕಾರ್ಯ ವೈಖರಿ, ಕರ್ತವ್ಯದ ಒತ್ತಡ, ರಿಸ್ಕ್ ಫ್ಯಾಕ್ಟರ್ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸುತ ಚಾಲ್ತಿಯಲಿರುವ ಸುತ್ತೋಲೆ 1677, ದಿನಾಂಕ: 25.06.2020 ರಲ್ಲಿನ ನಿರ್ದೇಶನಗಳನ್ನು ಮುಂದುವರೆಸಲಾಗಿದೆ. ಅದರಂತೆ, ಕ್ರಮ ಕೈಗೊಳ್ಳತಕ್ಕದ್ದು.



Scanned with OKEN Scanner

2. ಉಳಿದ ಎಲ್ಲಾ ವರ್ಗದ ಮಹಿಳಾ ಸಿಬ್ಬಂದಿಗಳು ಹಾಗೂ ಮಹಿಳಾ ಅಧಿಕಾರಿಗಳು ನಿರ್ವಹಿಸುವ ಕೆಲಸದಲ್ಲಿ ಹೆಚ್ಚಿನ ರಿಸ್ಕ್ ಫ್ಯಾಕ್ಟರ್ ಇರುವುದಿಲ್ಲವಾದ್ದರಿಂದ ಸದರಿಯವರಿಗೆ ಸುತ್ತೋಲೆ ಸಂಖ್ಯೆ: 1473, ದಿನಾಂಕ:10-10-2012 ರ ಕಂಡಿಕೆ 'ಅ' ನ್ನು ಪರಿಗಣಿಸದೆ ಸರ್ಕಾರದಲ್ಲಿರುವಂತೆ ಒಟ್ಟಾರೆ 180 ದಿನಗಳ ಹೆರಿಗೆ ರಜೆಯನ್ನು ಅವರ ಅವಶ್ಯಕತೆಗೆ ಅನುಗುಣವಾಗಿ ಮಂಜೂರು ಮಾಡುವುದು.

ಉಳಿದಂತೆ, ಸಂಖ್ಯೆ:1473, ದಿನಾಂಕ: 10-10-2012 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಂಬಂಧಪಟ್ಟವರೆಲ್ಲರೂ ಮೇಲಿನ ಆದೇಶಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಸದರಿ ನಿರ್ದೇಶನಗಳು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಹಾಗೂ ನಂತರ ಹೆರಿಗೆ ರಜೆ ಪಡೆಯುವವರಿಗೆ ಅನ್ವಯಿಸುವಂತೆ ಜಾರಿಗೆ ಬರುತ್ತದೆ.

(ಅಕ್ರಂ ಪಾಷ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಕಕರಸಾ ನಿಗಮ ರವರಿಗೆ.
3. ನಿರ್ದೇಶಕರು (ಸಿಬ್ಬಂದಿ:ಜಾಗೃತ), ಕರಾರಸಾ ನಿಗಮ, ರವರಿಗೆ.

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ/ವಾಕರಸಾ ಸಂಸ್ಥೆ/ಕಕರಸಾ ನಿಗಮ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) / (ನೇಮಕ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ಪತ್ರ ಕಡತ.

Scanned with OKEN Scanner